ಸೀಮೆಯ ಪ್ರಶ್ನೆ ಮಾಡುತ್ತಿದ್ದಾರೆ ಅನ್ನಿಸಿತೋ ಏನೋ, ಉತ್ತರಿಸದೆ ಸುಮ್ಮನಿದ್ದ.

''ಯಾವ ಭಾಷೆಯಲ್ಲಿ ಬೈಯುತ್ತೀ?'' ಪುನಃ ಕೇಳಿದೆ ನಾನು.

ಉತ್ತರ ಸಿಗದೆ ನಾನು ಮುಂದುವರಿಯುವುದಿಲ್ಲ ಅನ್ನಿಸಿತೋ ಏನೋ... ''ಹಿಂದಿಯಲ್ಲಿ'' ಪೆಚ್ಚುಪೆಚ್ಚಾಗಿ ನುಡಿದ.

''ಯಾರ ಮೇಲಾದ್ರೂ ಕೋಪ ಬಂದಾಗ ನೀನು ಸಾಮಾನ್ಯವಾಗಿ ಬಳಸುವ ಅತಿಕೆಟ್ಟ ಬೈಗುಳ ಪದ ಯಾವುದು?''

ಇಂತಹ ಪ್ರಶ್ನೆಗಳಿಗೆ ಯಾವ ರೀತಿ ಉತ್ತರಿಸೋದು ಎಂದು ತಿಳಿಯದೆ ನಾಚಿಕೊಂಡು ನಿಂತ.

''ಹೇಳು... ಹೇಳು'' ಎಂದೆ ನಾನು.

''ಸಾಲಾ'' ಎಂದ.

''ಕೋಪ ಸ್ವಲ್ಪ ಹೆಚ್ಚಾಗಿಯೇ ಬಂದಿದ್ದರೆ?''

''ಬೆಹೆನ್ ಚೋದ್'' ಎಂದ ಗಂಭೀರವಾಗಿ.

''ಯಾಕೆ ಕೇಳಿದ್ದು ಅಂದರೆ ಈ ಆಫೀಸಿನಲ್ಲಿ ಕೋಪ ಬಂದರೆ ಮಾತು ನುಂಗಿಕೊಳ್ಳಬೇಕು. ಇಲ್ಲಿ ಮೊದಲು ಈ ನೌಕರಿ ಮಾಡಿಕೊಂಡಿದ್ದವ ಸೀನಿಯರ್ ಒಬ್ಬರಿಗೆ ''ಸಾಲಾ'' ಎಂದದ್ದಕ್ಕೆ ನೌಕರಿ ಕಳೆದುಕೊಂಡ, ನಿನಗೆ ಅವಕಾಶ ಮಾಡಿಕೊಟ್ಟ. ತಿಳೀತಾ?'' ಎಂದೆ ನಾನು.

''ಓಕೆ'' ಎಂಬಂತೆ ತಲೆಯಾಡಿಸಿದ.

ಅವನ ನೌಕರಿಗೆ ಅಷ್ಟು ಪ್ರಶ್ನೆಗಳು ಸಾಕು ಎನಿಸಿತ್ತು. ''ಕಪ್, ಪ್ಲೇಟ್, ಟ್ರೇ, ಕಿಚನ್ ಎಲ್ಲ ಸದಾ ಕಾಲ ಕ್ಲೀನಾಗಿ ಇಟ್ಕೋಬೇಕು. ಕೈಗೆ ಗ್ಲೌಸ್ ಹಾಕಿಕೊಂಡೇ ಸರ್ವ್ ಮಾಡಬೇಕು. ಎಂ.ಡಿ. ಎದುರು, ದೊಡ್ಡ ದೊಡ್ಡ ಗೆಸ್ಟ್‌ಗಳ ಎದುರು ಕಪ್ ಕೆಳಕ್ಕೆ ಹಾಕುವುದು, ನೀರು, ಚಹಾ ಚೆಲ್ಲುವುದು ಇತ್ಯಾದಿ ಅಸಡ್ಡೆ ಕೆಲಸ ಮಾಡಿದೆಯಾದರೆ ಕೂಡಲೇ ವೀಸಾ ಕ್ಯಾನ್ಸಲ್ ಮಾಡಿ ವಾಪಸ್ ಕಳುಹಿಸುತ್ತಾರೆ. ನೆನಪಿಟ್ಟುಕೋ... ಸದಾ ಒಳ್ಳೆ ಇಸ್ತ್ರಿ ಹಾಕಿದ ಬಟ್ಟೆಗಳನ್ನು ಧರಿಸಬೇಕು. ನೀಟಾಗಿ ಶೇವ್ ಮಾಡಿಕೊಂಡಿರಬೇಕು. ಕೂಲಿ ಕೆಲಸಕ್ಕೆ ಹೋಗುವವರ ಹಾಗೆ ಬಂದೆಯಾದ್ರೆ ನೌಕರಿ ಕಳೆದುಕೊಳ್ಳುವುದು ನಿಶ್ಚಿತ. ಗೊತ್ತಾಯ್ತಾ?'' ಅಂದೆ ನಾನು.

''ಮ್ಯಾನೇಜರ್ ಎಲ್ಲ ಹೇಳಿದ್ದಾರೆ ಸಾರ್'' ಎಂದನಾತ!

ಈತ ನಮ್ಮ ಮ್ಯಾನೇಜರ್ ಕ್ಯಾಂಡಿಡೇಟ್. ಅದಕ್ಕೇ ಸೀನಿಯರ್ ಸಹೋದ್ಯೋಗಿಗೆ ''ಸಾಲಾ'' ಎಂದದ್ದು ಘನಘೋರ ಅಪರಾಧ ಎಂದು ಬಿಂಬಿಸಿ ಮೊದಲಿನವನನ್ನು ಟರ್ಮಿನೇಟ್ ಮಾಡಿ ಈತನಿಗೆ ಅವಕಾಶ ಮಾಡಿಕೊಟ್ಟಿದ್ದರು. ನೀನು ಯಾಕೆ ಹಾಗೆ ಹೇಳಿದೆ ಎಂಬ ಸಾಮಾನ್ಯ ವಿವರಣೆ ಕೊಡುವುದಕ್ಕೂ ಹಿಂದಿನವನಿಗೆ ಅವಕಾಶ ಕೊಡಲಿಲ್ಲ. ಈಗ ಈತನನ್ನು ಇಂಟರ್ವ್ಯೂಗೆ ಕರೆಸಿ ಎಲ್ಲವೂ ಸರಿಯಾಗಿದೆ ಎಂದು ಬಿಂಬಿಸಲು ನನ್ನಿಂದ ಈ ನಾಟಕ ಮಾಡಿಸುತ್ತಿದ್ದಾರೆ! ಎಲ್ಲ ಹೀಗೇ ನಡೆಯಲಿ ನನಗೇನು ಎನ್ನುತ್ತ, ''ಸರಿ, ಆಯ್ಕೆಯಾದರೆ ಮತ್ತೆ ತಿಳಿಸುತ್ತೇವೆ'' ಎಂದೆ ನಾನು.

ಓಕೆ ಎಂಬಂತೆ ತಲೆಯಾಡಿಸಿ ಹೊರಟ ಆತ ಮತ್ತೆ ಅರೆಕ್ಷಣ ಅಲ್ಲೆ ನಿಂತ. ''ಹೇಳುವುದು, ಕೇಳುವುದೇನಾದರೂ ಇದೆಯಾ?'' ಕೇಳಿದೆ ನಾನು.

''ಸಾರ್, ಸಂಬಳ ಎಷ್ಟು?'' ಕೇಳಿದ ಆತ.

ಕೆಲಸಕ್ಕೆ ಸೇರಿಕೊಳ್ಳುವ ಮೊದಲು ಯಾರಾದರೂ ಕೇಳಲೇಬೇಕಾದ ನ್ಯಾಯವಾದ ಪ್ರಶ್ನೆ. ನನಗೆ ಸಂತೋಷವಾಗಿತ್ತು. ನಮ್ಮ ಎಲ್ಲ ಹುಡುಗರೂ ಇಂತಹ ಧೈರ್ಯ ತೋರಿಸಬೇಕು. ಆಗಲೇ ಮ್ಯಾನೇಜ್‌ಮೆಂಟಿನ ಮಂದಿ ತೋರಿಸುವ ದರ್ಪಕ್ಕೆ ಕಡಿವಾಣ ಬೀಳುವುದು. ಆದರೆ, ಈತ ಖುದ್ದು ಮ್ಯಾನೇಜರರ ಕ್ಯಾಂಡಿಡೇಟಾಗಿ ಇದನ್ನು ನನ್ನಲ್ಲಿ ಕೇಳಬಾರದಿತ್ತು!